## ಬಾಳೆ ನಾರಿನ ಸೀರೆ

ಭಾರತೀಯ ಸಂಪ್ರದಾಯ ಎಂದ ಕೂಡಲೇ ಮೊದಲು ನೆನಪಿಗೆ ಬರುವುದೇ ಸೀರೆ. ವಿವಿಧ ಬಗೆಯ ದಾರಗಳ ಮೂಲಕ ಸೀರೆಯನ್ನು ಮಾಡಿರುವುದನ್ನು ನೋಡಿರಬಹುದು. ಆದರೆ ಬಾಳೆ ನಾರಿನಿಂದ ಮಾಡಿದ ಸೀರೆ ಇತರ ಬಗೆಯ ಸೀರೆಗಳಿಗೆ ಹೋಲಿಸಿದರೆ ಕಾಣಲು ಸಿಗುವುದು ಬಹಳ ಅಪರೂಪ. 18ನೇ ಪುತ್ತೂರು ತಾಲ್ಲೂಕು ಮಟ್ಟದ ಕನ್ನಡ ಸಾಹಿತ್ಯ ಸಮ್ಮೇಳದ ವಸ್ತು ಪ್ರದರ್ಶನದಲ್ಲಿ ಪಾಂಡುರಂಗ ಭಟ್ ಅವರು ಏರ್ಪಡಿಸಿದ್ದ ಬಾಳೆ ನಾರಿನ ಸೀರೆ ಪ್ರದರ್ಶನ ನೆರೆದವರ ಗಮನ ಸೆಳೆದಿತ್ತು.

**-ಸುಷ್ಮಾ ಸದಾಶಿವ್, ಪುತ್ತೂರು**






## ಅದೃಷ್ಟ ದೇವತೆ!

ಇತ್ತೀಚೆಗೆ ನಾನು ಯೂರೋಪ್ ಪ್ರವಾಸದಲ್ಲಿ ಜೆಕ್ ಗಣರಾಜ್ಯದ ಪ್ರಾಹ ನಗರಕ್ಕೆ ಹೋಗಿದ್ದಾಗ ಓಲ್ಡ್ ಟೌನ್ ಸ್ಕ್ವೇರ್‌ನಲ್ಲಿ ಕಂಡು ಬಂದ ದೃಶ್ಯವಿದು. ಮೈತುಂಬಾ ಬಂಗಾರ ಬಣ್ಣದ ಉಡುಪು ಧರಿಸಿ, ಕೈಯಲ್ಲಿ 'ಅದೃಷ್ಟ' ಎಂಬ ಫಲಕ ಹಿಡಿದುಕೊಂಡಿದ್ದ ವಿಗ್ರಹವೊಂದು ನನ್ನನ್ನು ಆಕರ್ಷಿಸಿತು. ಹತ್ತಿರ ಹೋಗಿ ನೋಡಿದಾಗ ಹಾಗೆ ಅಲುಗಾಡದೆ ನಿಂತಿರುವುದು ಓರ್ವ ಹೆಣ್ಣೆಂದು ತಿಳಿದು ಅಚ್ಚರಿಯಾಯಿತು. ಅದೃಷ್ಟ ದೇವತೆ ಒಲಿಯಲೆಂದು ಪ್ರಾರ್ಥಿಸುತ್ತ ಜನರು ಆಕೆಗೆ ಹಣ ನೀಡುತ್ತಿದ್ದರು.

**-ಜೆ. ನಾಗೇಂದ್ರ, ಮಂಗಳೂರು**

## ಹಿಟ್ಟುಂಡೆ ಕುಡುಪು

ಹಿಂದಿನ ಕಾಲದಲ್ಲಿ ಬಂಗಾರದ ಆಭರಣಗಳು ಮತ್ತಿತರ ಅಮೂಲ್ಯ ವಸ್ತುಗಳನ್ನು ಜೋಪಾನವಾಗಿಡಲು ಮುಚ್ಚಳವಿರುವ ಕುಡುಪಿನಂತಹ ಬುಟ್ಟಿಗಳನ್ನು ಬಳಸುತ್ತಿದ್ದರು. ಹಿಟ್ಟುಂಡೆ ಎಂಬ ಕಳೆ ಹುಲ್ಲಿನಿಂದ ಆಕರ್ಷಕವಾಗಿ ಇದನ್ನು ಹೆಣೆಯುತ್ತಿದ್ದರು. ಮಲೆನಾಡಿನ ಕೆಲವೆಡೆ ಈ ಕರಕುಶಲ ಕಲೆ ಈಗಲೂ ಜೀವಂತವಾಗಿದ್ದು ಇದನ್ನು ಹಿಟ್ಟುಂಡೆ ಬುಟ್ಟಿಯೆಂದೇ ಕರೆಯುತ್ತಾರೆ. ಎಷ್ಟು ಹಳೆಯದಾದರೂ ಹಾಳಾಗದ, ಸವೆಯದ ಇಂತಹ ವಸ್ತುಗಳು ಇಂದು ಕಣ್ಮರೆಯಾಗುತ್ತಿವೆ. ತೀರ್ಥಹಳ್ಳಿಯ ರಂಜದಕಟ್ಟೆ ವೆಂಕಟರಮಣ ಕಾಮತರ ವಸ್ತು ಸಂಗ್ರಹಾಲಯದಲ್ಲಿ ಈ ಅಪರೂಪದ ಕುಡುಪು ಕಂಡುಬಂತು.

**-ಧರ್ಮಾನಂದ ಶಿರ್ವ, ಬೆಂಗಳೂರು**

